DW-1 : ಅಶ್ವತ್ಥಪ್ಪ

ದಿನಾಂಕಃ **30.09.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ. ಐ.ಎಸ್.ಎ., ವಕೀಲರಿಂದಃ**

ಸ.ನಂ. 55 ರ 7 ಎಕರೆ 25 ಗುಂಟೆ ಸ್ವತ್ತನ್ನು ನಾರಾಯಣಮ್ಮ ಮತ್ತು ವೆಂಕಟರಮಣಪ್ಪ ರವರು ಗುರ್ರಪ್ಪ ರವರ ಮಗ ಶಂಕರಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಸ್ವತ್ತನು ದಿನಾಂಕಃ 29.04.2016 ರಂದು ಶಂಕರಪ್ಪ ರವರ ಚಿಕ್ಕಪ್ಪನ ಮಕ್ಕಳಾದ ರಾಮಾಂಜಿನಪ್ಪ, ಶ್ರೀನಿವಾಸ, ಪ್ರಭಾಕರ ಮತ್ತು ಪ್ರಸನ್ನ ಕುಮಾರ್ ರವರು ನೋಂದಣಿ ವಿಭಾಗ ಪತ್ರ ಮಾಡಿಕೊಂಡು ಹಂಚಿಕೆ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಅಕ್ಕಲಪ್ಪ ಮತ್ತು ಗುರ್ರಪ್ಪ ರವರ ಮಕ್ಕಳು ಸ.ನಂ. 51 ಮತ್ತು 55 ರ ಸ್ವತ್ತನ್ನು ಭೀಮಪ್ಪನ ಮೊಮ್ಮಕ್ಕಳು ಮಾರಾಟ ಮಾಡಿದ್ದನ್ನು ಆಕ್ಷೇಪ ಮಾಡಿಲ್ಲ ಎಂದರೆ ಗೊತ್ತಿಲ್ಲ. ಅದೇ ರೀತಿ ಸ.ನಂ. 25 ಮತ್ತು 30/1 ರ ಸ್ವತ್ತನ್ನು ಗುರ್ರಪ್ಪ ಮತ್ತು ಅಕ್ಕಲಪ್ಪ ರವರ ಮೊಮ್ಮಕ್ಕಳು ಮಾರಾಟ ಮಾಡಿದ ಬಗ್ಗೆ ಭೀಮಪ್ಪ ಮೊಮ್ಮಕ್ಕಳು ಆಕ್ಷೇಪ ಮಾಡಿಲ್ಲ ಎಂದರೆ ಗೊತ್ತಿಲ್ಲ. ಸ.ನಂ. 25 ಮತ್ತು 35/1 ರ ಸ್ವತ್ತನ್ನು ದಾವೆ ಚಾಲ್ತಿಯಲ್ಲಿ ಇದ್ದಾಗ ನಾವು ಮಾರಾಟ ಮಾಡಿದ್ದೇವೆ ಎಂದರೆ ಗೊತ್ತಿಲ್ಲ. ಸ.ನಂ. 51 ಮತ್ತು 55 ರ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರಿಗೆ ಮಾತ್ರ ಹಕ್ಕು ಇದ್ದು ನಂಜಮ್ಮ, ನಾರಾಣಯಪ್ಪ, ಅಕ್ಕಲಪ್ಪ ಮತ್ತು ಗುರ್ರಪ್ಪ ರವರ ವಾರಸುದಾರರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(6, 7, 11 ಮತ್ತು 12 ನೇ ವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲು ಕಾಲವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು).

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.